1	2	3
ಬಾಗೇವಾಡಿ	6.00	5.10
ಮುದ್ದೇಬಿಹಾಲ್	1.00	0.45
ಒಟ್ಟು	**50.00**	**22.25**

ಇ) ಈ ಯೋಜನೆಯಡಿ 299 ಫಲಾನುಭವಿಗಳ ತಾಕಿನಲ್ಲಿ 362 ಹೆಕ್ಟೇರ್ ವಿಸ್ತೀರ್ಣದಲ್ಲಿ ಹನಿ ನೀರಾವರಿ ಕಾಮಗಾರಿ ಕೆಲಸಗಳನ್ನು ಅಳವಡಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಖಾಸಗಿ ಬಸ್ಸುಗಳನ್ನು ಗುತ್ತಿಗೆಗೆ ಪಡೆದಿರುವುದು

3943 (4294) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಖಾಸಗಿ ಬಸ್ಸುಗಳನ್ನು ಗುತ್ತಿಗೆಗೆ ಪಡೆದುಕೊಳ್ಳಲಾಗುತ್ತಿದೆಯೆ;

ಆ) ಹಾಗಿದ್ದರೆ ಎಷ್ಟು ಬಸ್ಸುಗಳನ್ನು ಗುತ್ತಿಗೆಗೆ ಪಡೆದುಕೊಳ್ಳಲಾಗಿದೆ; (ಸಂಸ್ಥೆ ವಾರು ವಿವರ ನೀಡುವುದು)

ಇ) ಈ ಬಸ್ಸುಗಳ ಮಾಲೀಕರ ಹೆಸರು ಬಸ್ಸುಗಳ ಸಂಖ್ಯೆಯನ್ನು ತಿಳಿಸುವುದು;

ಈ) ಈ ಖಾಸಗಿ ಬಸ್ಸುಗಳು ಪ್ರತಿದಿನ ಎಷ್ಟು ಕಿಲೋಮೀಟರ್ ಕ್ರಮಿಸಬೇಕಾಗುತ್ತದೆ; ಪ್ರತಿ ಕಿಲೋಮೀಟರ್‌ಗೆ ನೀಡುತ್ತಿರುವ ಹಣ ಎಷ್ಟು;

ಉ) ಈ ಗುತ್ತಿಗೆಯಲ್ಲಿ ಅವ್ಯವಹಾರ ನಡೆಯುತ್ತಿರುವುದು ನಿಜವೆ;

ಊ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಹೌದು.

ಆ) ಕ.ರಾ.ರ.ಸಾ.ಸಂ. 260
ಬೆಂ.ಮ.ಸಾ.ಸಂ. 643
ಈ.ಕ.ರ.ಸಾ.ಸಂ. 639
ವಾ.ಕ.ರ.ಸಾ.ಸಂ. 63
ಒಟ್ಟು **1605**

ಇ) ಅನುಬಂಧ–ಅ ನಲ್ಲಿ ವಿವರವನ್ನು ಒದಗಿಸಲಾಗಿದೆ.

ಈ) ಸದರಿ ಬಸ್ಸು ಒಂದು ದಿನಕ್ಕೆ 250 ಕಿ.ಮೀ ಕಾರ್ಯಾಚರಣೆ ಮಾಡಿದರೆ ಪ್ರತಿ ಕಿ.ಮೀ. ದರವು ಕೆಳಕಂಡಂತಿರುತ್ತದೆ;

ಸಾರಿಗೆ ಸಂಸ್ಥೆಗಳು:

ಬಸ್ಸಿನ ವರ್ಗ	ಪ್ರತಿ ಕಿ.ಮೀ.ದರ**
ವೇಗದೂತ	ರೂ. 8.71
ಅಲ್ಟ್ರಾ ಡೀಲಕ್ಸ್	ರೂ. 9.78
ನಗರ	ರೂ. 8.96

(216 ಕಿ.ಮೀ.ಗೆ ರೂ. 9.37)

ಬೆಂ. ಮ.ಸಾ.ಸಂ.

(1) ಪ್ರತಿ ದಿನ ಕನಿಷ್ಟ 220–224 ಕಿ.ಮೀ ನಿಗದಿಪಡಿಸಿದೆ.

(2) ಪ್ರತಿ ಕಿ.ಮೀ.ಗೆ ರೂ. 11.77 ನೀಡಲಾಗುತ್ತಿದೆ.

(** ವೇಗದೂತ ಹಾಗೂ ಅಲ್ಟ್ರಾ ಡೀಲಕ್ಸ್ ಬಸ್ಸುಗಳಿಗೆ ಪ್ರತಿ ಲೀಟರ್ ದರ ರೂ. 18.45 ರಂತೆ ಹಾಗೂ ನಗರ ಮಾದರಿ ಬಸ್ಸುಗಳಿಗೆ ರೂ. 18.80 ರಂತೆ).

ಡೀಸಲ್ ದರಗಳಲ್ಲಿ ಹೆಚ್ಚಳವಾದಾಗ/ಕಡಿಮೆಯಾದಾಗ ಬಾಡಿಗೆ ದರವು ಅನುಗುಣವಾಗಿ ಹೆಚ್ಚಳವಾಗುವುದು/ಕಡಿಮೆಯಾಗುವುದು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮಾದಕ ದ್ರವ್ಯ ಪತ್ತೆ ಪ್ರಕರಣಗಳು

3994 (4666) : ಶ್ರೀ ಸಭಾಪತಿ.ಯು.ಆರ್. (ಉಡುಪಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2000–01, 2001–02 2002–03 ರ ಸಾಲಿನಲ್ಲಿ ಪತ್ತೆ ಹಚ್ಚಲಾದ ಮಾದಕ ದ್ರವ್ಯ ಸಾಗಣೆ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಅವುಗಳಲ್ಲಿ ಎಷ್ಟು ವಾಹನಗಳನ್ನು ಮುಟ್ಟುಗೋಲು ಹಾಕಲಾಗಿದೆ.

ಇ) ಎಷ್ಟು ಪ್ರಕರಣಗಳಿಗೆ ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಿ ಆರೋಪಿಗಳನ್ನು ಬಂದಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) 107

ಆ) ಅನುಬಂಧ 'ಅ' ರಲ್ಲಿ ವಿವರಗಳನ್ನು ನೀಡಲಾಗಿದೆ.

ಆ) 16 ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಇ) 163 ಆರೋಪಗಳನ್ನು ಬಂಧಿಸಲಾಗಿದೆ.

ಅನುಬಂಧ – ಅ

ಕ್ರ. ಸಂ.	ಜಿಲ್ಲೆ	ವರ್ಷ	ಪತ್ತೆ ಹಚ್ಚಲಾದ ದ್ರವ್ಯ ಸಕಗಹೆ ಪ್ರಕಗಣಗಳ ಸಂ.
1	2	3	4
1.	ಬೆಂಗಳೂರು ನಗರ	2000–01	–
		2001–02	–
		2002–03	–
2.	ಮೈಸೂರು ನಗರ	2000–01	–